ಆಗಬಹುದು. ಅವು ಯಾವುದೇ ಒಂದು ಜಾತಿ, ಜನಾಂಗಕ್ಕೆ ಮೀಸಲಲ್ಲ. ಪೂರ್ವಾರ್ಜಿತ ಸಂಸ್ಕಾರ ಅಥವಾ ಮತ್ತೊಬ್ಬರಿಂದ ಪ್ರೇರಿತವಾಗಿ ತಾನೂ ಅವರಂತೆ ಆಗಬೇಕೆಂಬ ಇಚ್ಛೆ ಮೂಡುತ್ತದೆ. ಇದನ್ನು ತಪ್ಪು ಅನ್ನಲಾಗದು' ಎಂದವರು ಗೊದ್ಲೆಯತ್ತ ಮಂದಹಾಸದ ನೋಟ ಬೀರಿ ಶಾಲೆಯ ಒಳ ಹೋದರು.

ತಾನು ಜನಿವಾರ ಹಾಕಿರುವುದಕ್ಕೆ ಮೇಷ್ಟ್ರು ಬೆತ್ತದಿಂದ ಬಾಸುಂಡೆ ಬರುವಂತೆ ಹೊಡೆಯಬಹುದು ಎಂದು ಹೆದರಿದ್ದ ಗೊದ್ಲೆ ಅವರ ಮಾತುಗಳಿಂದ ನಿರಾಳನಾದ. ಯಾರು ಬೇಕಾದರೂ ಬ್ರಾಹ್ಮಣರಾಗಬಹುದು ಎಂಬ ಅವರ ಮಾತು ಅವನಲ್ಲಿ ಅವ್ಯಕ್ತ ಖುಷಿ ತಂದಿತು.

ದಾಸೇಗೌಡರ ಜಮೀನಿಗೆ ಎತ್ತಿನಗಾಡಿಯಲ್ಲಿ ತಿಪ್ಪೆ ಗೊಬ್ಬರ ಹೇರಲು ಹೋಗಿದ್ದ ಮುಳ್ಕಟ್ಟ ಸಂಜೆ ಗುಡಿಸಿಲಿಗೆ ಬರುವಾಗ, ಪಟೇಲರು ಕರೆಯುತ್ತಿರುವುದಾಗಿ ಅವರ ಮನೆ ಆಳು ಹೇಳಿದ. ಮನೆಯ ಹತ್ತಿರ ಹೋದಾಗ ಪಟೇಲರೊಂದಿಗೆ ರಾಮಸ್ವಾಮಿ ಶ್ರೀಕಂಠ ಇದ್ದರು.

'ಮುಳ್ಕಟ್ಟ, ಗೊದ್ಲೆ ಜನಿವಾರ ತೆಗುದ್ನ?'

'ಇಲ್ಲ ಪಟೇಲ್ರೆ'

'ಅಪ್ನು ಮಗ್ನು ಸರ್ಕಂಡು ನಾಟ್ಕ ಅಡ್ತಾ ಇದೀರೇನ್ಲ?'

ಪಟೇಲರ ಬಿರುಸಾದ ಮಾತಿಗೆ ಮುಳ್ಕಟ್ಟ ಬೆಚ್ಚಿದ.

ರಾಮಸ್ವಾಮಿ ಹೇಳಿದರು. 'ನೋಡು ಮುಳ್ಕಟ್ಟ, ನೀನು ನಮ್ಮ ಹೊಲಗದ್ದೆನ್ನೆಲ್ಲ ಉತ್ತು ಬಿತ್ತಿ ನಿಯತ್ನಿಂದ ದುಡಿತೀಯ. ಅದ್ಕಾಗಿ ನಿನಗೆ ಮೊದಲೇ ವಿಷಯ ತಿಳಿಸ್ತಾ ಇದೀನಿ. ನಿನ್ಮಗ ಹಾಕಿರೋ ಜನಿವಾರನ ತೆಗುಸ್ಲೇಬೇಕು. ಇದು ನಮ್ಮ ಅಗ್ರಹಾರದ ಗೌರವದ ಪ್ರಶ್ನೆ. ಇಲ್ದಿದ್ರೆ ನಾವು ಪೊಲೀಸ್ ಸ್ಟೇಷನ್‌ಗೆ ಕಂಪ್ಲೇಟ್ ಕೊಡಬೇಕಾಗುತ್ತೆ'.

ಅವರ ಮಾತು ಕೇಳಿ ಮುಳ್ಕಟ್ಟ ಅಕ್ಷರಶಃ ನಡುಗಿ ಹೋದ. ಭಾರವಾದ ಹೆಜ್ಜೆಗಳನ್ನಿಡುತ್ತ ಗುಡಿಸಿಲಿಗೆ ಬಂದಾಗ ಗೊದ್ಲೆ ಪಾಠ ಓದಿಕೊಳ್ಳುತ್ತಿದ್ದ. ಕರ್ರಿಲಿ ಊದು ಕೊಳವೆಯಿಂದ 'ಉಫ್, ಉಫ್' ಎಂದು ಗಾಳಿ ಊದಿ ಹೊಗೆಯಾಡುತ್ತಿದ್ದ ಒಲೆ ಉರಿಸಲು ಪ್ರಯತ್ನಿಸುತ್ತಿದ್ದಳು.

ಕೈ ಕಾಲು ಮುಖ ತೊಳೆದುಕೊಂಡ ಮುಳ್ಕಟ್ಟ, ಗೂಡಿನ ದೇವರಿಗೆ ಕೈಮುಗಿದು, 'ಜನಿವಾರ ತೆಗಿಯಂಗೆ ನನ್ಮಗನಿಗೆ ಗ್ಯಾನ ಕೊಡು' ಎಂದು ಬೇಡಿಕೊಂಡ.

ರಾತ್ರಿ ಉಂಡು ಮಲಗಿದಾಕ್ಷಣ ದಣಿದಿದ್ದ ಅವನ ದೇಹವನ್ನು ನಿದ್ರಾ ದೇವಿ ಪ್ರೀತಿಯಿಂದ ಅಪ್ಪಿಕೊಂಡಳು. ಹೊರಗಡೆ ಯಾರೋ ಕೂಗುತ್ತಿರುವುದು ಕೇಳಿಸಿತು. ಎದ್ದು ಬಂದು ನೋಡಿದಾಗ ಇಬ್ಬರು ಪೊಲೀಸರು ನಿಂತಿದ್ದರು. ಅವರಲ್ಲೊಬ್ಬ ಜೋರು ದನಿಯಲ್ಲಿ,

'ನೀನೇ ಏನೋ ಮುಳ್ಕಟ್ಟ? ಕರೆಯೋ ನಿನ್ನ ಮಗನ್ನ ಹೊರಕ್ಕೆ' ಎಂದ.

'ಇಲ್ಲ, ಅವ್ನು ವತಾರನೇ ಎದ್ದು ಹೋದ. ಇನ್ನು ಬಂದಿಲ್ಲ'.

ಅವರ ಮಾತುಗಳನ್ನು ಕೇಳಿಸಿಕೊಂಡ ಗೊದ್ಲೆ ಹೊರ ಬಂದು ನಿಂತ. ಪೊಲೀಸನ ದೃಷ್ಟಿ ಅವನತ್ತ ಹೊರಳಿತು.

'ಯಾರೋ ನೀನು?'

'ನಾನು ಗೊದ್ಲೆ'

'ನೀನೆಯೋ, ನಡಿ ಸ್ಟೇಷನ್ನಿಗೆ' ಎಂದು ಅವನ ಕುತ್ತಿಗೆ ಪಟ್ಟಿ ಹಿಡಿದು ಎಳೆದುಕೊಂಡು ಹೊರಟ. ಮುಳ್ಕಟ್ಟ ಹಿಂಬಾಲಿಸಿದ. ಸ್ಟೇಷನ್‌ನಲ್ಲಿ ಲಾಠಿ ಕೈಗೆತ್ತಿಕೊಂಡ ಪೊಲೀಸ್ 'ಶರಟು ಬಿಚ್ಚೋ' ಎಂದ. ಗೊದ್ಲೆ ಶರಟು ಬಿಚ್ಚಿದಾಗ 'ಜನಿವಾರನೂ ತೆಗಿ' ಎಂದ.

'ಇಲ್ಲ ನಾನು ತೆಗಿಯಲ್ಲ'.

'ನಂಗೆ ಎದುರುತ್ರ ಕೊಡ್ತೀಯ ಲೌಡಿ ಮಗನೆ' ಎಂದವನು ಲಾಠಿಯಿಂದ ಬಡಿಯತೊಡಗಿದ. ನೋವಿನಿಂದ ಗೊದ್ಲೆ 'ಅವ್ವೋ ಅಪ್ಪೋ' ಎಂದು ಕೂಗತೊಡಗಿದ.

'ನಿಮ್ಮದಮ್ಮಯ್ಯ, ನಿಮ್ಕಾಲಿಗೆ ಬೀಳ್ತೀನಿ. ಅವುನ್ನ ಹೊಡಿಬ್ಯಾಡಿ. ಬಿಡಿ, ಬಿಡಿ' ಎಂದು ಜೋರಾಗಿ ಕಿರುಚಿದ ಮುಳ್ಕಟ್ಟ ದಿಗ್ಗನೆ ಮೇಲೆದ್ದು ಕುಳಿತ. ಅಕ್ಕಪಕ್ಕ ಕಣ್ಣಾಡಿಸಿದ. ಯಾರೂ ಕಾಣಿಸಲಿಲ್ಲ. ಬರೀ ಕತ್ತಲು. ತಾನು ಕಂಡಿದ್ದು ಕನಸು ಎಂಬುದು ಅರಿವಾಗಿ ಸಮಾಧಾನದ ನಿಟ್ಟುಸಿರ ಹೊರ ಚೆಲ್ಲಿದ.

'ಇಲ್ಲ, ಬೋ ಪಿರೀತಿಯಿಂದ ಸಾಕಿರೋ ನನ್ಮಗನ ಮೈ ಮೇಲೆ ಪೊಲೀಸ್ರ ಲಾಠಿ ಏಟು ಬೀಳ್ಬಾರ್ದು. ಅವ್ನು ಬ್ಯಾಸರ ಮಾಡಿ ಕಂಡ್ರೂ ಪರ್ವಾಗಿಲ್ಲ. ನಾನೇ ಅವನ ಮೈಯಿಂದ ಜನಿವಾರನ ಈಗ್ಲೇ ತೆಗಿತೀನಿ. ಅದ್ಕೆ ಇದೇ ಸರಿಯಾದ ಸಮಯ' ಎಂದು ಯೋಚಿಸಿದವನು, ಚಡ್ಡಿ ಜೇಬಿನಿಂದ ಬೆಂಕಿಪಟ್ಣ ತೆಗೆದು ಕಡ್ಡಿಗೀರಿದ. ಅದರ ಬೆಳಕಿನಲ್ಲಿ ಕರ್ರಿಲಿ